ಸಾಕ್ಷಿಯನ್ನು ದಿಃ **12.04.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಎಸ್ ವಕೀಲರಿಂದಃ

ವಾದಿ ಚಿಕ್ಕಯ್ಯ ರವರಿಗೆ ಸಾಲ ನೀಡಿರುತ್ತಾರೆ. ಸದರಿ ಚಿಕ್ಕಯ್ಯ ರವರು ಇರಸವಾಡಿ ಗ್ರಾಮಕ್ಕೆ ಸೇರಿದವರು.ನಾನು, ಸಿದ್ದರಾಜು ಮತ್ತು ಮಹೇಶ ಎಲ್ಲರೂ ಒಂದೇ ಊರಿಗೆ ಸೇರಿದವರು. ನಿಪಿ.1 ರ ದಾಖಲೆಯನ್ನು ಶ್ರೀಕಂಠ ಎಂಬುವವರು ಬರೆದಿರುತ್ತಾರೆ. ನಿಪಿ.1 ರ ದಾಖಲೆಯನ್ನು ಮನ್ನೆಹುಂಡಿ ಗ್ರಾಮದಲ್ಲಿ ಬರೆದಿರುತ್ತಾರೆ. ಸದರಿ ಬರೆಯುವ ಸಂದರ್ಭದಲ್ಲಿ ನಾನು ವಾದಿ, ಶ್ರೀಕಂಠ. ಸಿದ್ದಯ್ಯ ರವರು ಹಾಜರಿದ್ದೆವು. ಹಣದ ವಿಚಾರವಾಗಿ ಮಾತುಕತೆ ನನ್ನ ಮುಂದೆ ಆಗಿರುವುದಿಲ್ಲ. ನಿಪಿ.1 ರ ದಾಖಲೆಯನ್ನು ಕೈ ಬರಹದಿಂದ ಬರೆಯಲಾಗಿದೆ. ನಾನು ಸಹಿ ಮಾಡುವಾಗ ಸದರಿ ದಾಖಲೆಯನ್ನು ಬರೆದುಕೊಂಡು ಬಂದಿರುತ್ತಾರೆ. ನಿಪಿ.1 ರಲ್ಲಿ ಚಿಕ್ಕಯ್ಯ ರವರಿಗೆ ಸಿದ್ದಯ್ಯ ರವರು ಹಣವನ್ನು ನೀಡುವ ಬಗ್ಗೆ ಬರೆಯಲಾಗಿದೆ. ನನ್ನ ಮುಂದೆ ಚಿಕ್ಕಯ್ಯ ಸದರಿ ದಾಖಲೆಗೆ ನನ್ನ ಮುಂದೆ ಒಂದು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಚಿಕ್ಕಯ್ಯ ರವರು ಕೆ ಇ ಬಿ ಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಯ್ಯ ಯಾವ ವಿಚಾರಕ್ಕಾಗಿ ಸಾಲ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಿಕ್ಕಯ್ಯ ರವರಿಗೆ ವಾದಿ 500 ರೂ ಮುಖಬೆಲೆಯ ಹಣವನ್ನು ನೀಡಿರುತ್ತಾರೆ. ಚಿಕ್ಕಯ್ಯ ರವರಿಗೆ ಸಾಕಷ್ಟು ಸಂಬಳ ಬರುತ್ತಿತ್ತು ಅವರಿಗೆ ಸಾಲ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ನನಗೆ ಗುತ್ತಿಲ್ಲ ಸಾಕ್ಷಿ ಮುಂದುವರಿದು ನನ್ನ ಸಮಕ್ಷಮ ಹಣ ಪಡೆದರುತ್ತಾರೆ ಎಂದು ನುಡಿಯುತ್ತಾರೆ. ನಾನು ವಾದಿ ಮತ್ತು ಮಹೇಶ ಮೂರು ಜನ ಸೇರಿ ನಿಪಿ.1 ನ್ನು ಈ ದಾವೆಗಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಿಕ್ಕಯ್ಯ 2 ಲಕ್ಷ ರೂಪಾಯಿಯನ್ನು ಸಾಲವಾಗಿ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಮುಂದೆ ಸಾಲ ಪಡೆದಿರುವುದಾಗಿ ನುಡಿಯುತ್ತಾರೆ ವಾದಿಗೆ ಸಹಾಯ ಮಾಡಲು

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದಾಖಲೆಯಲ್ಲಿ ಒಂದು ಕಡೆ ಸಹಿ ಮಾಡಿರುತ್ತೇನೆ. ಪ್ರತಿವಾದಿ ಮತ್ತು ಸಾಕ್ಷಿ ತಲಾ ಒಂದು ಸಹಿ ಹಾಕಿರುತ್ತಾರೆ. ಸಾಲದ ದಾಖಲೆ ಸ್ಟಾಂಪ್ ಪೇಪರ್ ಆಗಿರುತ್ತದೆ. ನನ್ನ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ವಾದಿಗೆ ಪ್ರತಿವಾದಿಗೆ ಯಾವುದೇ ಹಣ ನೀಡಿರುವುದಿಲ್ಲ ಆದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ